ಅಕ್ಟೋಬರ್-2020

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪರಿಹಾರ parihara 9480985555

# ಸ್ವಚ್ಛತಾವಾಣಿ
ವಾರ್ತಾಪತ್ರ

## ಸ್ವಚ್ಛೋತ್ಸವ–ನಿತ್ಯೋತ್ಸವ

ರಾಜ್ಯದ ಪ್ರತಿಯೊಂದು ಗ್ರಾಮವು ಸ್ವಚ್ಛ, ಸುಂದರ, ಆರೋಗ್ಯಕರ ಮತ್ತು ತ್ಯಾಜ್ಯಮುಕ್ತವಾಗಿಸುವ ಉದ್ದೇಶದಿಂದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ಸ್ವಚ್ಛ ಭಾರತ್ ಮಿಷನ್(ಗ್ರಾ) ಯೋಜನೆಯಡಿ ರಾಜ್ಯಾದ್ಯಂತ ತ್ಯಾಜ್ಯ ವಿಲೇವಾರಿ ಘಟಕಗಳನ್ನು ಸ್ಥಾಪಿಸಲು ಕ್ರಮ ಕೈಗೊಂಡಿದೆ. ಹೀಗೆ ಸ್ಥಾಪಿಸಲಾಗುವ ತ್ಯಾಜ್ಯ ವಿಲೇವಾರಿ ಘಟಕದ ಸ್ವಚ್ಛ ಸಂಕೀರ್ಣವು ಏಕರೂಪದ ಬಣ್ಣ, ಚಿಹ್ನೆ, ಸಂದೇಶ ಮತ್ತು ವಿನ್ಯಾಸವನ್ನು ಹೊಂದಿರಬೇಕು ಎಂಬ ದೃಷ್ಟಿಯಿಂದ "ತ್ಯಾಜ್ಯ ನಿರ್ವಹಣಾ ಘಟಕಗಳಲ್ಲಿ ಏಕರೂಪದ ಬ್ರ್ಯಾಂಡಿಂಗ್" ಅನ್ನು ಇಲಾಖೆಯು ವಿನ್ಯಾಸಪಡಿಸಿದೆ.






ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಘನ ಮತ್ತು ದ್ರವ ತ್ಯಾಜ್ಯದ ಸಮರ್ಪಕ ವಿಲೇವಾರಿ ಕುರಿತು ವ್ಯಾಪಕವಾದ ಜಾಗೃತಿ ಮೂಡಿಸಲು 2ನೇ ಅಕ್ಟೋಬರ್ 2020 ರಿಂದ 31ನೇ ಅಕ್ಟೋಬರ್ 2020 ವರೆಗೆ "ಸ್ವಚ್ಛೋತ್ಸವ–ನಿತ್ಯೋತ್ಸವ" ಮಾಸಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ. ಈ ನಿಟ್ಟಿನಲ್ಲಿ ಎಲ್ಲಾ 30 ಜಿಲ್ಲೆಗಳ ಗ್ರಾಮ/ಗ್ರಾಮ ಪಂಚಾಯಿತಿಗಳ ಹಂತದಲ್ಲಿ ವಿವಿಧ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಗ್ರಾಮೀಣ ಸಮುದಾಯದಲ್ಲಿ ತ್ಯಾಜ್ಯ ನಿರ್ವಹಣೆ ಮತ್ತು ಸಮರ್ಪಕ ವಿಲೇವಾರಿ ಕುರಿತು ಶ್ರಮದಾನ, ವಸ್ತು ಪ್ರದರ್ಶನ, ಉದ್ಘಾಟನಾ ಕಾರ್ಯಕ್ರಮಗಳು, ಪ್ರಬಂಧ ಸ್ಪರ್ಧೆ ಸೇರಿದಂತೆ, ಬೀದಿಗಳನ್ನು ಶುಚಿಗೊಳಿಸುವುದು, ಚರಂಡಿ ಸ್ವಚ್ಛತೆ, ಶಾಲಾ–ಅಂಗನವಾಡಿ ಆವರಣ ಶುಚಿ ಮಾಡುವುದು, ಕಸ ವಿಂಗಡಣೆ ಬಗ್ಗೆ ಸಮುದಾಯಗಳಲ್ಲಿ ನಿರಂತರ ಜಾಗೃತಿ ಮೂಡಿಸುವುದು, ತಿಪ್ಪೆಗುಂಡಿ ನಿರ್ವಹಣೆಯಂತಹ, ಆಟೋ ಅನೌನ್ಸ್‌ಮೆಂಟ್ ನಂತಹ ಹಲವು ಕಾರ್ಯಕ್ರಮಗಳನ್ನು ಮಾಸಾಚರಣೆಯ ಅಂಗವಾಗಿ ರಾಜ್ಯಾದ್ಯಂತ ನಡೆಸಲಾಗುತ್ತಿದೆ.

## ವಿಶ್ವ ಕೈತೊಳೆಯುವ ದಿನ (Global Handwashing Day)

"Hand Hygiene for All" ಈ ಘೋಷವಾಕ್ಯದೊಂದಿಗೆ 2020ರ ವಿಶ್ವ ಕೈತೊಳೆಯುವ ದಿನವನ್ನು ರಾಜ್ಯಾದ್ಯಂತ ಅಕ್ಟೋಬರ್–15, 2020 ರಂದು ಆಚರಿಸಲಾಯಿತು. ಹೆಸರೇ ಹೇಳುವಂತೆ ಕೈಗಳ ನೈರ್ಮಲ್ಯವನ್ನು ಕಾಪಾಡಿಕೊಳ್ಳಲು ಶೌಚಾಲಯ ಬಳಸಿದ ಬಳಿಕ, ಯಾವುದಾದರೂ ವಸ್ತುಗಳನ್ನು ಮುಟ್ಟಿದ ನಂತರ ಪ್ರತಿ ಸಲವೂ ಸೋಪು ಮತ್ತು ನೀರಿನಿಂದ ಕೈಗಳನ್ನು ಶುಚಿಗೊಳಿಸುವುದರ ಮಹತ್ವ ಕುರಿತು ರಾಜ್ಯಾದ್ಯಂತ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು. ಇದರ ಜೊತೆಯಲ್ಲಿಯೇ ಸ್ವಚ್ಛೋತ್ಸವ–ನಿತ್ಯೋತ್ಸವ ಮಾಸಾಚರಣೆಯ ಅಂಗವಾಗಿ ಅಕ್ಟೋಬರ್–15 ರಂದೇ ಆಯ್ದ ಜಿಲ್ಲೆಗಳಲ್ಲಿ ಗುರುತಿಸಿದ ಎರಡನೇ ಸ್ವಚ್ಛ ಸಂಕೀರ್ಣವನ್ನು ಲೋಕಾರ್ಪಣೆ ಮಾಡಲಾಯಿತು.





## ತರಬೇತಿ ಕಾರ್ಯಕ್ರಮಗಳು (Orientation on JJM Operational Guidelines)

ಜಲ ಜೀವನ್ ಮಿಷನ್ ಯೋಜನೆಯಡಿಯಲ್ಲಿ ಜಿಲ್ಲೆಗಳಿಗೆ ನೂತನವಾಗಿ ಆಯ್ಕೆಯಾಗಿರುವ **ಐ.ಎಸ್.ಎ** ಗಳಿಗೆ ಜಿಲ್ಲೆಗಳಲ್ಲಿ **ಐ.ಎಸ್.ಎ** ಗಳ ಪಾತ್ರ ಮತ್ತು ಜವಾಬ್ದಾರಿ ಹಾಗೂ JJM Operational Guidelines ಬಗ್ಗೆ ದಿನಾಂಕ: 13.10.2020 ರಂದು ಮಾಹಿತಿ ನೀಡಲಾಯಿತು. ವೀಡಿಯೋ ಕಾನ್ಫರೆನ್ಸ್ ಮೂಲಕ ನಡೆದ ಈ ಕಾರ್ಯಾಗಾರದಲ್ಲಿ ಜಿಲ್ಲೆಗಳಿಗೆ ನೂತನವಾಗಿ ನೇಮಕವಾಗಿರುವ **ಐ.ಎಸ್.ಎ** ಗಳ ಸಿಬ್ಬಂದಿ, ಸೇರಿ 124 ಮಂದಿ ಪಾಲ್ಗೊಂಡಿದ್ದರು. ಈ ಕಾರ್ಯಾಗಾರದಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಡಿ ನಿರ್ದೇಶಕರು **ಐ.ಎಸ್.ಎ**, ಯುನಿಸೆಫ್ ರಾಜ್ಯ ಸಂಯೋಜಕರು ಹಾಗೂ AE ವಿಕಿರಣ್, JJM Operational Guidelines ಮತ್ತು **ಐ.ಎಸ್.ಎ** ಗಳ ಪಾತ್ರ ಮತ್ತು ಜವಾಬ್ದಾರಿ ಬಗ್ಗೆ ಮಾಹಿತಿ ನೀಡಿದರು.



## ಗ್ರಾಮ ಕ್ರಿಯಾ ಯೋಜನೆ

ಜಲಜೀವನ್ ಮಿಷನ್ ಯೋಜನೆಯಡಿ 2024 ರೊಳಗಾಗಿ ರಾಜ್ಯದ ಎಲ್ಲಾ ಮನೆಗಳಿಗೂ ಕಾರ್ಯಾತ್ಮಕ ನಳ ಸಂಪರ್ಕದ ಮೂಲಕ ಶುದ್ಧ ಕುಡಿಯುವ ನೀರಿನ್ನು ಒದಗಿಸುವ ಗುರಿ ಹೊಂದಲಾಗಿದೆ. ಸದ್ಯ ರಾಜ್ಯದ 10 ಜಿಲ್ಲೆಗಳಲ್ಲಿ ಈಗಾಗಲೇ ಗ್ರಾಮ ಕ್ರಿಯಾ ಯೋಜನೆಯನ್ನು ಸಕ್ರಿಯವಾಗಿ ಸಿದ್ಧಪಡಿಸಲಾಗುತ್ತಿದ್ದು, ಬಹುತೇಕ ಜಿಲ್ಲೆಗಳಲ್ಲಿ ಕಾರ್ಯಾತ್ಮಕ ನಳ ಸಂಪರ್ಕ ಕಲ್ಪಿಸುವ ಕಾರ್ಯ ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದೆ.

